ನಿನ್ನಂಥ ಹುಡುಗಿಯರೇ! ಬಂಗಲೆಯ ಬಳಿ ಕಾರು ಬಂದದ್ದೇ ತಡ ಹುಡುಗರ ಕೇಕೆ, ಚಪ್ಪಾಳೆ, ಸಂಭ್ರಮ. ಆದರೆ, ಮೂರ್ನಾಲ್ಕು ಜನ ಸೆಕ್ಯುರಿಟಿಯವರು ಭಾರೀ ಸ್ಮಾರ್ಟಾದ ಸ್ಟಾರನ್ನು ತೋಳು, ಭುಜ ಹಿಡಿದು ಮನೆಯ ಗೇಟಿನ ಒಳಭಾಗಕ್ಕೆ ಒಂದೊಂದೇ ಹೆಜ್ಜೆಯಲ್ಲಿ ಕರೆದುಕೊಂಡು ಹೋದರು. ಆಗಲೂ ಹುಡುಗರ ಗದ್ದಲವೋ ಗದ್ದಲ. ಆಶ್ಚರ್ಯ, ನಮ್ಮ ಸೂಪರ್‌ಸ್ಟಾರ್ ಅವರಿಗೆ ನೆಲದ ಮೇಲೆ ನಿಲ್ಲಲೇ ಆಗುತ್ತಿಲ್ಲ. ಕಾರಣವೇನು ಅಂದುಕೊಳ್ಳುವಾಗಲೇ ನಮ್ಮತ್ತ ಜೋಲುಮೋರೆ ಹಾಕಿ ಕೈಯೆತ್ತಿ ಟಾಟಾ, ಬೈಬೈ ಹೇಳಿದರು. ಅವರು ಗೇಟಿನ ಒಳಗೆ ಹೋಗುವಲ್ಲಿ ನಮ್ಮ ದೇವರಿಗೆ ಏನಾಗಿದೆ ನೋಡಲು ಬಿಡಿ ಅಂತ ಹುಡುಗರದು ಒಂದೇ ಹಟ. ಸರಿಯಾಗಿ ನೋಡಿದರೆ ಚಂದ್ರಕಾಂತರ ಮುಖ ನಮ್ಮ ವಪ್ಪಾರೆ ಶೆಡ್ಡಿನ ಕೆರೆದ ಮಣ್ಣಿನ ಗೋಡೆಯಂತಿದ್ದಿತು! ಅಷ್ಟು ಹೊತ್ತಿಗೆ ಹೊರಗೆ ನಿಂತವರೆಲ್ಲರ ಅಭಿಮಾನದ ಗದ್ದಲ ಹೆಚ್ಚಲು ನಮ್ಮನ್ನು ಚದುರಿಸಲು ಸೆಕ್ಯುರಿಟಿಗಳು ಗೇಟಿನಿಂದೀಚೆಗೆ ನಾಲ್ಕೈದು ನಾಯಿಗಳ ಚೈನು ಕಳಚಿಬಿಟ್ಟರು. ಅವು ನಮ್ಮತ್ತ ಎಗರಿಬಂದ ಸ್ಪೀಡಿಗೆ ನಾವೆಲ್ಲಾ ದಿಕ್ಕು ತಪ್ಪಿದೆವು.' ಪಳನಿ ನಿಡಿದಾದ ಉಸಿರು ಎಳೆದುಬಿಟ್ಟು ಕೂತ. ಅದಾಗಿ, 'ನೋಡುತ್ತಿರು ಇಷ್ಟರಲ್ಲೇ ನಾನು ಚಂದ್ರಕಾಂತ್ ಸಾರ್ ಅವರನ್ನು ಮಾತಾಡಿಸಿ ಷೇಕ್‌ಹ್ಯಾಂಡ್ ಕೊಡುತ್ತೇನೆ. ಆಮೇಲೆ ನೋಡಿಕೋ ನನ್ನ ವರಸೆ' ಎಂದ.

ಕಣ್ಣಾಸೆಲ್ವಿಗೆ ಚಿನ್ನಪಳನಿಯ ಮಾತು ಕನಸಿನಲ್ಲಿ ಕಂಡ ಕಾಸಿನ ಗಂಟು ಮಾತ್ರವಲ್ಲ, ಬೆಟ್ಟದ

